	ವ್ಹಿಸಲ್ ವಾಹಕ ಕಿ.ಮೀ.ಗಳಲ್ಲಿ	ರ್‍ಯಾಬಿಟ್ ವಾಹಕ ಕಿ.ಮೀ.ಗಳಲ್ಲಿ	ಕಂಬಗಳು ಸಂಖ್ಯೆ ಗಳಲ್ಲಿ	ಇತರೆ
ಬಿಜಾಪುರ ವಿಭಾಗ				ಇತರೆ ಅವಶ್ಯಕ ಮಾರ್ಗ ಸಾಮಗ್ರಿಗಳನ್ನು ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಅವಶ್ಯಕತೆಗನು ಗುಣವಾಗಿ ಪೂರೈಸಲಾಗಿದೆ
ಬಿಜಾಪುರ	12.152	2.390	676	
ಬಾಗೇವಾಡಿ	90.381	17.778	761	
ದೇವರಹಿಪ್ಪರಗಿ	26.583	5.229	325	
ಬಬಲೇಶ್ವರ	74.431	14.641	578	
ನಾಗಠಾಣ	28.861	5.677	375	
ಮುದ್ದೇಬಿಹಾಳ	36.456	7.171	768	
ಇಂಡಿ ವಿಭಾಗ				
ಇಂಡಿ	153.4	12	1600	
ನಾಗಠಾಣ	35.7	1	790	
ಸಿಂಧಗಿ	112	4.6	489	
ದೇವರಹಿಪ್ಪರಗಿ	27.1	0	234	

ಕರ್ನಾಟಕ ವಿದಾನಸಭೆ

47ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ)
ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು (ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಯ ವಿವರಗಳನ್ನು ಗ್ರಾಮವಾರು ಅಂಕಿ ಅಂಶಗಳನ್ನು ಒದಗಿಸುವುದು);

ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ವಸತಿ ಯೋಜನೆಗಳಡಿ ಒಟ್ಟು 4923 ಮನೆಗಳನ್ನು ನೀಡಲಾಗಿದ್ದು ವಿವರ ಇಂತಿದೆ.

ರಾಜ್ಯ ಸರ್ಕಾರದ ಯೋಜನೆಗಳು:

ಯೋಜನೆಗಳು	05-06	06-07	07-08	ಒಟ್ಟು
ಗ್ರಾಮೀಣ ಆಶ್ರಯ	1442	2022	*	3464

ಗ್ರಾಮೀಣ ಅಂಬೇಡ್ಕರ್	60	*	141	201
ಗ್ರಾಮೀಣ ಆಶ್ರಯ – ವಿಶೇಷ ವರ್ಗ	*	232	*	232
ಒಟ್ಟು	**1502**	**2254**	**141**	**3897**

ಕೇಂದ್ರ ಸರ್ಕಾರದ ಯೋಜನೆಗಳು:

ಯೋಜನೆಗಳು	05–06	06–07	07–08	ಒಟ್ಟು
ಇಂದಿರಾ ಅವಾಸ್ ಯೋಜನೆ	414	253	359	1026
ಒಟ್ಟು	**414**	**253**	**359**	**1026**

* ಸರ್ಕಾರದಿಂದ ಈ ಶ್ರೇಣಿಗಳಿಗೆ ಗುರಿ ನಿಗದಿಪಡಿಸಿರುವುದಿಲ್ಲ.

ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಿದೆ.

ಆ) ಈ ಮನೆಗಳ ನಿರ್ಮಾಣಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ಯಾವ ಯಾವ ಯೋಜನೆಯ ನೆರವಿನಿಂದ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ;

ಈ ಮನೆಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ ಒಟ್ಟು ರೂ. 1003.10 ಲಕ್ಷ ಹಣವನ್ನು ಕೇಂದ್ರ ಸರ್ಕಾರದಿಂದ ರೂ.245.70 ಲಕ್ಷ ಹಣವನ್ನು ಖರ್ಚು ಮಾಡಲಾಗಿದೆ.

ಇ) ಈ ಅವಧಿಯಲ್ಲಿ ಸದರಿ ಯೋಜನೆಗಳಡಿಯಲ್ಲಿ ನಿರ್ಮಿಸಲು ಯೋಜಿಸಿರುವ ಮನೆಗಳೆಷ್ಟು; ನಿಗದಿತ ಸಮಯದಲ್ಲಿ ಮನೆಗಳನ್ನು ನಿರ್ಮಿಸದಿರಲು ಕಾರಣವೇನು;

ಈ ಅವಧಿಯಲ್ಲಿ ಸದರಿ ಯೋಜನೆಗಳಡಿಯಲ್ಲಿ ಒಟ್ಟು 4923 ಮನೆಗಳನ್ನು ನಿರ್ಮಿಸಲು ಯೋಜಿಸಿದ್ದು 4007 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು 913ಮನೆಗಳು ಪ್ರಗತಿಯಲ್ಲಿದ್ದು 3 ಮನೆಗಳ ಫಲಾನುಭವಿಗಳು ಮನೆಯನ್ನು ಪ್ರಾರಂಭ ಮಾಡಿರುವುದಿಲ್ಲ. ಈ ಕೆಳಕಂಡ ಕಾರಣಗಳಿಂದ ಸದರಿ ಮನೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಆಗಿರುವುದಿಲ್ಲ.

1. ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬವಾಗುತ್ತಿರುವುದು.

2. ಫಲಾನುಭವಿಗಳು ಕಡುಬಡವರಾಗಿರುವುದರ ಜೊತೆಗೆ ಕೂಲಿಗಾಗಿ ವಲಸೆ ಹೋಗುತ್ತಿದ್ದು ನಿಗದಿತ ಅವಧಿಯಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳದಿರುವುದು.
3. ಫಲಾನುಭವಿಗಳು ಮೊದಲ ಕಂತಿನ ಹಣವನ್ನು ಪಡೆಯಲು ತಳಪಾಯ ನಿರ್ಮಿಸಿಕೊಳ್ಳಬೇಕಾಗಿದ್ದು. ಮೊದಲ ಹಂತದಲ್ಲಿ ಫಲಾನುಭವಿಗಳ ಬಳಿ ಹಣದ ಕೊರತೆ ಇರುವುದು.

2005–06ನೇ ಸಾಲಿನಿಂದ ಎಲ್ಲಾ ವಸತಿ ಯೋಜನೆಗಳನ್ನು ಗ್ರಾಮ ಪಂಚಾಯ್ತಿಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದ್ದು. ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಈ) ಈ ಕ್ಷೇತ್ರದಲ್ಲಿ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ (ಗ್ರಾಮವಾರು ಅಂಕಿ ಅಂಶಗಳೊಂದಿಗೆ ಪೂರ್ಣ ವಿವರಗಳನ್ನು ನೀಡುವುದು);

ಈ ಕ್ಷೇತ್ರದಲ್ಲಿ ಒಟ್ಟು 913 ಮನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು ನಿಗಮವು ಯೋಜನೆಗಳನ್ನು ಗ್ರಾಮಪಂಚಾಯಿತಿವಾರು ಅನುಷ್ಠಾನಗೊಳಿಸಲಾಗುತ್ತಿದ್ದು ವಿವರಗಳನ್ನು ಅನುಬಂಧ 'ಅ' ದಲ್ಲಿ ಲಗತ್ತಿಸಿದೆ.

ಉ) ಪ್ರಸಕ್ತ ವರ್ಷದಲ್ಲಿ ಸದರಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಮನೆಗಳೆಷ್ಟು (ಜಿಲ್ಲಾವಾರು ಮತ್ತು ಕ್ಷೇತ್ರವಾರು ಮೀಸಲಿಟ್ಟ ಹಣವೆಷ್ಟು ವಿವರ ನೀಡುವುದು);

2008–09ನೇ ಸಾಲಿನಲ್ಲಿ ಹಿಂದಿನ ಶ್ರೇಣಿಯಲ್ಲಿ ಪ್ರಗತಿಯಲ್ಲಿದ್ದ ಮನೆಗಳ ಪೈಕಿ ಈವರೆಗೆ ಒಟ್ಟು 237089 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 'ಆ' ಲಗತ್ತಿಸಲಾಗಿದೆ.

ಯೋಜನೆಗಳು	2008–09ನೇ ಸಾಲಿನಲ್ಲಿ ಪೂರ್ಣಗೊಂಡ ಮನೆಗಳು	ಮೀಸಲಿಟ್ಟ ಹಣ (ಲಕ್ಷಗಳಲ್ಲಿ)
ಗ್ರಾಮೀಣ ಆಶ್ರಯ	163989	44277.03
ಗ್ರಾಮೀಣ ಅಂಬೇಡ್ಕರ್	10124	2734.29
ಇಂದಿರಾ ಆವಾಸ್ ಯೋಜನೆ	60942	15235.50
ನಗರ ಆಶ್ರಯ	2034	511.75
ಒಟ್ಟು	**237089**	**62758.57**

ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ಗ್ರಾಮ ಪಂಚಾಯತ್‌ಗಳಿಂದ ಹೆಚ್ಚುವರಿ ಮನೆಗಳಿಗಾಗಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿವೆಯೆ;

ಹೌದು.

ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಬರುವ ದಿಂಡವಾರ ಗ್ರಾಮಪಂಚಾಯಿತಿಗೆ 30 ಮನೆಗಳನ್ನು 2006–07ನೇ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ನೀಡಲು 19.09.2008ರಂದು ನಿಗಮವನ್ನು ಕೋರಲಾಗಿರುತ್ತದೆ.

ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು?

2006–07ನೇ ಶ್ರೇಣಿಯು ಮುಕ್ತಾಯಗೊಂಡು 2 ವರ್ಷಗಳಾಗಿರುವುದರಿಂದ ಈ 30 ಮನೆಗಳ ಫಲಾನುಭವಿಗಳು ಅರ್ಹರಿದ್ದಲ್ಲಿ ಪ್ರತಿ ವರ್ಷ ನೀಡಲಾಗುವ ಗುರಿಯಲ್ಲಿ ಪರಿಗಣಿಸಿಕೊಳ್ಳಲು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸಲಾಗಿದೆ.

ವಇ/48/ಯುಹೆಚ್‌ಎಸ್/09

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿಧಾನಸಭೆ

52 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಸುವರ್ಣ ಗ್ರಾಮೋದಯ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಒದಗಿಸಲಾಗಿರುವ ಅನುದಾನವೆಷ್ಟು; ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ;

ಸುವರ್ಣ ಗ್ರಾಮೋದಯ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಮಂಜೂರಾಗಿರುವ ಅನುದಾನ ರೂ.1000.00 ಕೋಟಿಗಳು. ಈ ಪೈಕಿ ರೂ.850.00 ಕೋಟಿಗಳನ್ನು 2006–07 ರಿಂದ 2008–09ನೇ ಸಾಲುಗಳ ಆಯವ್ಯಯದಲ್ಲಿ ಒದಗಿಸಲಾಗಿದೆ. 1ನೇ ಹಂತದಲ್ಲಿ 1204 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಆ) ಬೆಳಗಾವಿ ಜಿಲ್ಲೆಗೆ ಈ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಒದಗಿಸಲಾದ ಅನುದಾನವೆಷ್ಟು; ಜಿಲ್ಲೆಯಲ್ಲಿ ಆಯ್ಕೆಯಾದ ಗ್ರಾಮಗಳ ಸಂಖ್ಯೆ ಎಷ್ಟು;